



1996ರ ಒಲಿಂಪಿಕ್ಸ್‌ನಲ್ಲಿ ಅಥ್ಲೀಟ್ ಶೈನಿ ವಿಲ್ಸನ್ ಓಟದ ವೈಖರಿ

## ಎರಡಂಕಿ ಮುಟ್ಟುವುದೇ ಭಾರತದ ಪದಕ ಪಟ್ಟಿ?

1900ರ ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಭಾರತ ಪಾಲ್ಗೊಳ್ಳಲು ಆರಂಭಿಸಿದ್ದು, ಇದುವರೆಗೆ 35 ಪದಕಗಳು ಬಂದಿವೆ. ನಾರ್ಮನ್ ಪಿಚರ್ಡ್, ಅಥ್ಲೆಟಿಕ್ಸ್‌ನ ಪುರುಷರ 200 ಮೀಟರ್ ಓಟ ಮತ್ತು 200 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದರು. ಇದಾದ ಬಳಿಕ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಇದುವರೆಗೆ ಒಂದೂ ಪದಕ ಗೆಲ್ಲಲು ಸಾಧ್ಯವಾಗಿರಲಿಲ್ಲ; ಹಿಂದಿನ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಈ ಕನಸು ನನಸು ಮಾಡಿದರು. ಜಾವೆಲಿನ್ ಎಸೆತದಲ್ಲಿ ಚಿನ್ನದ ಪದಕದ ಹೊಳಪು ಮೂಡಿಸಿದರು.

ಹಾಕಿಯಲ್ಲಿ ಎಂಟು ಚಿನ್ನ, ಒಂದು ಬೆಳ್ಳಿ ಹಾಗೂ ಮೂರು ಕಂಚಿನ ಪದಕಗಳು ಬಂದಿವೆ. ಶೂಟಿಂಗ್‌ನಲ್ಲಿ ನಾಲ್ಕು (ರಾಜವರ್ಧನ್ ಸಿಂಗ್ ರಾಥೋಡ್, ಅಭಿನವ್ ಬಿಂದ್ರಾ, ವಿಜಯಕುಮಾರ್ ಹಾಗೂ ಗಗನ್ ನಾರಂಗ್), ಕುಸ್ತಿಯಲ್ಲಿ ಏಳು (ಕೆ.ಡಿ. ಜಾಧವ್, ಸುಶೀಲ್ ಕುಮಾರ್ ಎರಡು ಬಾರಿ, ಯೋಗೇಶ್ವರ ದತ್, ಸಾಕ್ಷಿ ಮಲೀಕ್, ರವಿಕುಮಾರ್ ದಹಿಯಾ, ಬಜರಂಗ್ ಪೂನಿಯಾ), ಬ್ಯಾಡ್ಮಿಂಟನ್ ಮೂರು (ಸೈನಾ ನೆಹ್ವಾಲ್, ಎರಡು ಬಾರಿ ಪಿ.ವಿ. ಸಿಂಧು), ಬಾಕ್ಸಿಂಗ್‌ನಲ್ಲಿ ಮೂರು (ವಿಜೇಂದರ್ ಸಿಂಗ್, ಎಂ.ಸಿ. ಮೇರಿಕೋಮ್, ಲವ್ಲಿನಾ ಬೋರ್ಗೊಹೈನ್), ಟೆನಿಸ್‌ನಲ್ಲಿ ಒಂದು (ಲಿಯಾಂಡರ್ ಪೇಸ್) ಮತ್ತು ವೇಟ್ ಲಿಫ್ಟಿಂಗ್‌ನಲ್ಲಿ ಒಂದು (ಕರ್ಣಂ ಮಲ್ಲೇಶ್ವರಿ) ಪದಕಗಳನ್ನು ತಂದುಕೊಟ್ಟಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಭಾರತ ಪದಕ ಪಟ್ಟಿಯಲ್ಲಿ ಒಮ್ಮೆಯೂ ಎರಡಂಕಿಯ ಸ್ಥಾನ ಮುಟ್ಟಿಲ್ಲ. ಹಿಂದಿನ ಎಲ್ಲ ಒಲಿಂಪಿಕ್ಸ್‌ಗಳಿಗಿಂತಲೂ ಭಾರತ ಟೋಕಿಯೊದಲ್ಲಿ ಏಳು ಪದಕಗಳನ್ನು ಗೆಲುವು ಪಡೆದಿದ್ದೇ ಇದುವರೆಗಿನ ಶ್ರೇಷ್ಠ ಸಾಧನೆ. ಭಾರತ ಗೆದ್ದ ಒಟ್ಟು 35 ಪದಕಗಳಲ್ಲಿ ಒಂದು ದಶಕದ ಅವಧಿಯಲ್ಲಿ 15 ಪದಕಗಳು ಬಂದಿವೆ. ಅದಕ್ಕೂ ಮೊದಲು ಗೆದ್ದಿದ್ದು, ಒಂದು, ಎರಡು ಮಾತ್ರ. ಪ್ರತಿ ಒಲಿಂಪಿಕ್ಸ್‌ನಲ್ಲಿ ಪದಕ ಗಳಿಕೆಯಲ್ಲಿ ತನ್ನದೇ ದಾಖಲೆಗಳನ್ನು ಮುರಿಯುತ್ತಿರುವ ಭಾರತ, ಪ್ಯಾರಿಸ್‌ನಲ್ಲಿ ಸಾಧನೆಯ ಹೊಸ ಗೋಪುರ ಕಟ್ಟುತ್ತದೆ ಎನ್ನುವ ನಿರೀಕ್ಷೆ ಬಲವಾಗಿದೆ.

ಅವರ ತಂದೆ ಮಹಮ್ಮದ್ ಜಮೀನ್ ಅಹ್ಮದ್ ಕ್ರೀಡಾಪಟುವಾಗಿದ್ದು ಮಗಳನ್ನೂ ತಮ್ಮದೇ ಹಾದಿಯಲ್ಲಿ ಕರೆದುಕೊಂಡು ಸಾಗುತ್ತಿದ್ದಾರೆ.

ಕೌಟುಂಬಿಕ ಕಟ್ಟುಪಾಡುಗಳನ್ನು ಮೀರಿ ಬೆಳೆದಿರುವ ನಿಖತ್, ಬಾಲ್ಯದಲ್ಲಿ ಅಭ್ಯಾಸಕ್ಕಾಗಿ ಮಹಿಳಾ ಬಾಕ್ಸರ್‌ಗಳು ಬಾರದೇ ಇರುವುದನ್ನು ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸಿದ್ದರು. ಆದ್ದರಿಂದ ಪುರುಷರ ಎದುರು ಸ್ಪರ್ಧೆ ನಡೆಸಿ ಗಟ್ಟಿಯಾದರು. ಅಪ್ಪನೇ ಮಗಳಿಗೆ ಸ್ಪರ್ಧಾಕಣದಲ್ಲಿ ಎದುರಾಳಿಯಾಗಿ ಬಾಕ್ಸಿಂಗ್ ಕೌಶಲ ಹೇಳಿಕೊಟ್ಟರು. ಜಿಮ್‌ನಲ್ಲಿ ಪುರುಷರ ನಡುವೆಯೇ ಗಟ್ಟಿಗಿತ್ತಿಯಂತೆ ಸವಾಲೊಡ್ಡಿದರು. ವಿಶಾಖಪಟ್ಟಣದಲ್ಲಿ ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಕೋಚ್ ಐ.ವಿ. ರಾವ್ ಬಳಿ ತರಬೇತಿ ಪಡೆದರು.

2009ರಲ್ಲಿ ನಿಖತ್‌ರ ನಿಜವಾದ ಪ್ರತಿಭೆ ಹೊರಬಂತು. ಸಬ್ ಜೂನಿಯರ್ ನ್ಯಾಷನಲ್ ಟೂರ್ನಿಯಲ್ಲಿ ಚಿನ್ನ ಮತ್ತು ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಇದುವರೆಗೆ 11 ಪದಕಗಳನ್ನು ಗೆದ್ದುಕೊಂಡಿದ್ದಾರೆ. ಹಿಂದಿನ ಎರಡು ವರ್ಷಗಳಿಂದ 28 ವರ್ಷದ ನಿಖತ್ ತೋರುತ್ತಿರುವ ಸ್ಥಿರ ಪ್ರದರ್ಶನದಿಂದಾಗಿ ಮೊದಲ ಬಾರಿಗೆ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ.

### ನಿರೀಕ್ಷೆಯ ಭಾರ ಹೊತ್ತಿರುವ ಮೀರಾಬಾಯಿ

ಹಿಂದಿನ ಒಲಿಂಪಿಕ್ಸ್‌ನ 49 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿರುವ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಮತ್ತೊಂದು ಪದಕ ಜಯಿಸುವ ನೆಚ್ಚಿನ ಆಟಗಾರ್ತಿ ಎನಿಸಿದ್ದಾರೆ. 90 ಕೆ.ಜಿ. ಸ್ನ್ಯಾಚ್ ವಿಭಾಗದಲ್ಲಿ ಸ್ಪರ್ಧಿಸಲಿರುವ ಅವರು 200ರಿಂದ 210 ಕೆ.ಜಿ. ಭಾರ ಎತ್ತುವ ಗುರಿ ಹೊಂದಿದ್ದಾರೆ.

ಗಾಯಗಳ ಸಮಸ್ಯೆಗಳ ಬಳಿಕ ಚೇತರಿಸಿಕೊಂಡಿರುವ ಮಣಿಪುರದ ಮೀರಾಬಾಯಿ ಕಳೆದ ವರ್ಷ ಆಯ್ದ ಕೆಲವು ಟೂರ್ನಿಗಳಲ್ಲಷ್ಟೇ ಪಾಲ್ಗೊಂಡಿದ್ದರು. ಪಟಿಯಾಲದಲ್ಲಿರುವ ರಾಷ್ಟ್ರೀಯ ಕ್ರೀಡಾ ಸಂಸ್ಥೆ ಮತ್ತು ಫ್ರಾನ್ಸ್‌ನಲ್ಲಿ ತರಬೇತಿ ಪಡೆದುಕೊಂಡಿದ್ದಾರೆ. 2022ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಹಾಗೂ ಕಳೆದ ವರ್ಷ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದುಕೊಂಡಿದ್ದರು.

### ಅದಿತಿ ಅಶೋಕ್: ಗಾಲ್ಫ್ ಚಾಂಪಿಯನ್

ಗಾಲ್ಫ್ ಆಟಗಾರ್ತಿ ಬೆಂಗಳೂರಿನ ಅದಿತಿ ಅಶೋಕ್ ಹಿಂದಿನ ವರ್ಷ ಇವಿಯನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿದ್ದರು. ಒಲಿಂಪಿಕ್ಸ್ ಗಾಲ್ಫ್ ರ‍್ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನ ಗಳಿಸಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಮಹಿಳಾ ವಿಭಾಗದಲ್ಲಿ ಹರಿಯಾಣದ ದೀಕ್ಷಾ ಡಾಗರ್ ಅರ್ಹತೆ ಗಳಿಸಿದ್ದಾರೆ.

### ಸ್ಥಿರ ಸಾಮರ್ಥ್ಯದ ಲವ್ಲಿನಾ

ಬಾಕ್ಸಿಂಗ್‌ನ ವೆಲ್ಟರ್‌ವೇಟ್ ವಿಭಾಗದಲ್ಲಿ ಹಿಂದಿನ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಅಸ್ಸಾಂನ ಲವ್ಲಿನಾ ಬೋರ್ಗೊಹೈನ್ ಅಲ್ಲಿನ ಪೊಲೀಸ್ ಇಲಾಖೆಯಲ್ಲಿ ಡೆಪ್ಯೂಟಿ ಸೂಪರಿಡೆಂಟೆಂಟ್ ಆಗಿದ್ದಾರೆ. ಅಂತರರಾಷ್ಟ್ರೀಯ ಅಮೆಚೂರ್ ಬಾಕ್ಸಿಂಗ್ ಸಂಸ್ಥೆಯ ಚುನಾಯಿತ ಸದಸ್ಯೆಯೂ ಆಗಿರುವ ಅವರು ಕಳೆದ ವರ್ಷದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಹಾಗೂ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡು ಸ್ಥಿರ ಸಾಮರ್ಥ್ಯ ತೋರಿಸುತ್ತಿದ್ದಾರೆ. ಆದ್ದರಿಂದ ಅವರು ಪ್ಯಾರಿಸ್‌ನಲ್ಲಿಯೂ 'ಪದಕಗಳ ಪಂಚ್' ಮಾಡುವ ಭರವಸೆ ಮೂಡಿದೆ.

## ಹಿರಿಯ ಆಟಗಾರನಿಗೆ ಧ್ವಜಧಾರಿಯ ಗೌರವ

ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಭಾರತ ತಂಡದ ಧ್ವಜಧಾರಿಯಾಗಿ ಹಿರಿಯ ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ಅವರನ್ನು ನೇಮಿಸಲಾಗಿದೆ. 41 ವರ್ಷದ ಅಚಂತ ಹತ್ತು ಬಾರಿ ರಾಷ್ಟ್ರೀಯ ಸೀನಿಯರ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದಾರೆ.

2004ರಲ್ಲಿ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ ಅಚಂತ 2008ರ ಬೀಜಿಂಗ್, 2016ರ ರಿಯೊ ಡಿ ಜನ್ಶೆರೊ ಮತ್ತು 2021ರ ಒಲಿಂಪಿಕ್ಸ್‌ಗಳಲ್ಲಿ ಸ್ಪರ್ಧೆ ಮಾಡಿದ್ದು ಈ ಬಾರಿಯೂ ಅರ್ಹತೆ ಪಡೆದುಕೊಂಡಿದ್ದಾರೆ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 13, ಏಷ್ಯನ್ ಗೇಮ್ಸ್‌ನಲ್ಲಿ ಎರಡು, ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಪದಕಗಳನ್ನು ಗೆದ್ದುಕೊಂಡಿದ್ದಾರೆ. ದೈಹಿಕವಾಗಿ ಫಿಟ್‌ನೆಸ್ ಕೂಡ ಅಗತ್ಯವಾಗಿರುವ ಟೇಬಲ್ ಟೆನಿಸ್‌ನಲ್ಲಿ ಸದಾ ಚೆಂಡಿನೊಂದಿಗೆ ಆಡುವ ಕಲೆ ಕರಗತವಾಗಿದೆ. ಅಚಂತ ಪ್ರಸ್ತುತ ಒಲಿಂಪಿಕ್ಸ್‌ನಲ್ಲಿರುವ ಭಾರತ ತಂಡದ ಹಿರಿಯ ಆಟಗಾರನೂ ಹೌದು.